## ಮೌಲ್ಯಯುತ ಲೇಖನ

ಅಕ್ಟೋಬರ್ 31ರ ಸಂಚಿಕೆಯಲ್ಲಿ ಪ್ರಕಟವಾದ ಶಶಿಕುಮಾರ್ ಸಿ. ಬರೆದಿರುವ 'ದೃಷ್ಟಿಹೀನರಿಗೆ ದೀಪಾವಳಿ' ಲೇಖನ ಮೌಲ್ಯಯುತವಾಗಿದೆ. ನೇತ್ರದಾನ ಮಾಡಿದ ವರನಟ ಡಾ. ರಾಜಕುಮಾರ್ ಹಾಗೂ ಅವರ ಪತ್ನಿ ಪಾರ್ವತಮ್ಮ, ದೇಹದಾನ ಘೋಷಿಸಿರುವ ಶಿವರಾಜ್ ಕುಮಾರ್, ನೇತ್ರದಾನ ಸಂಕಲ್ಪ ತೊಟ್ಟಿರುವ ರಾಹುಲ್ ಗಾಂಧಿ, ಯಡಿಯೂರಪ್ಪ, ತೆಲುಗು ನಟ ಚಿರಂಜೀವಿ, ಮಾಜಿ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಎಲ್ಲರೂ ಅಭಿನಂದನೀಯರು.

—ಪಿ. ಜಯವಂತ ಪೈ, ಕುಂದಾಪುರ

## ನಗೆಲೇಪನ



ಅ.31ರ ಸಂಚಿಕೆಯಲ್ಲಿ ಸಂಕೇತ್ ಗುರುದತ್ತ ಬರೆದಿರುವ ಹಿರಿಯ ವ್ಯಂಗ್ಯಚಿತ್ರಕಾರ ಕೆ.ಆರ್. ಸ್ವಾಮಿಯವರ ಕುರಿತ ಲೇಖನವು ಅರ್ಥಪೂರ್ಣವಾಗಿತ್ತು. ಲವಲವಿಕೆಯ, ಸಶಕ್ತ ವ್ಯಂಗ್ಯಚಿತ್ರಗಳ ಮೂಲಕ, ಸಮಾಜದ ಅಂಕುಡೊಂಕುಗಳನ್ನು ಸರಿಪಡಿಸಲು ಶ್ರಮಿಸಿದ ಈ ಎಲೆಮರೆಯ ಕಾಯಿಯಂಥ ಹಿರಿಯ ವ್ಯಂಗ್ಯಚಿತ್ರಕಾರ ನೂರ್ಕಾಲ ಬಾಳಲಿ. ಸಂತೃಪ್ತ ನಗೆಯ ಅವರ ಭಾವಚಿತ್ರ ಚೆನ್ನಾಗಿದೆ.

—ರಮೇಶ್ ಬಿ.ಎಂ. ಬೆಂಗಳೂರು

## ಮನ್ನೆಕೆನ್ ಪಿಸ್

ಅ.31ರ ಸಂಚಿಕೆಯಲ್ಲಿ ಪ್ರಕಟವಾದ 'ಮನ್ನೆಕನ್ ಪಿಸ್' (ಲೇ: ಕೆ.ಪಿ. ಸತ್ಯನಾರಾಯಣ) ಲೇಖನ ಚೆನ್ನಾಗಿ ಮೂಡಿಬಂದಿದೆ. ಕಳೆದ ವರ್ಷ ನಾನು 'ಬ್ರುಸೆಲ್ಸ್'ಗೆ ಭೇಟಿಯಿತ್ತ ದಿನಗಳು ನೆನಪಾದವು. ಹಲವಾರು ಚಾಕಲೇಟ್ ಮಳಿಗೆಗಳಲ್ಲಿ ಸಹ 'ಮನ್ನೆಕೆನ್ ಪಿಸ್' ಪ್ರತಿಕೃತಿಗಳ ಚಾಕಲೇಟ್‌ಗಳು ಲಭ್ಯವಿರುವುದು ಅಚ್ಚರಿಮೂಡಿಸಿತು.

—ಜಿ.ನಾಗೇಂದ್ರ, ಕಾವೂರು, ಮಂಗಳೂರು

## ಮರೆಯಾದ ಓಟ-ಆಟ



ಅ.24ರ ಸಂಚಿಕೆಯಲ್ಲಿ ಕಾವ್ಯಶ್ರೀ ಎನ್. ಅವರ ಬರಹ 'ಓಡ್ತಾ ಓಡ್ತಾ ಆರೋಗ್ಯ' ಮನೋಜ್ಞವಾಗಿದೆ. ಮಕ್ಕಳು ಶಾಲೆಯಿಂದ ಮನೆಗೆ ಬಂದಕೂಡಲೇ ಆಟ ಓಟ ಮರೆತು ಮೊಬೈಲ್ ಫೋನ್ ಕೈಯಲ್ಲಿ ಹಿಡಿದುಕೊಂಡು ಆಟವಾಡುತ್ತಾರೆ. ಮಕ್ಕಳು ಗಲಾಟೆ ಮಡುತ್ತಾರೆಂದು ತಾಯಂದಿರು ಅವರ ಕೈಗೆ ಮೊಬೈಲ್ ಕೊಟ್ಟು ತಮ್ಮ ಕೆಲಸದಲ್ಲಿ ತೊಡಗುತ್ತಾರೆ. ಮಕ್ಕಳು ಅದರಲ್ಲಿಯೇ ಮಗ್ನರಾಗಿ ಆಟ ಓಟ ಮರೆಯುತ್ತಾರೆ. ಎಲ್ಲರ ಮನೆಯ ಪರಿಸ್ಥಿತಿಯೂ ಇದೇ ಆಗಿದೆ. ಹಿಂದಿನಕಾಲದಲ್ಲಿ ಮೊಬೈಲ್ ಹಾವಳಿ ಇಲ್ಲದಿದ್ದಾಗ ಮಕ್ಕಳು ಸ್ನೇಹಿತರ ಒಡಗೂಡಿ ಆಟ ಪಾಠಗಳಲ್ಲಿ ತೊಡಗುತ್ತಿದ್ದರು; ತುಂಬಾ ಆರೋಗ್ಯವಂತರಾಗಿದ್ದರು. ಈಗಲೂ ಕಾಲ ಮಿಂಚಿಲ್ಲ, ಪೋಷಕರು ಮಕ್ಕಳ ಕೈಗೆ ಮೊಬೈಲ್ ಫೋನುಗಳನ್ನು ಕೊಡುವುದು ನಿಲ್ಲಿಸಿ ಆಟ, ಊಟ ಓಟಗಳಲ್ಲಿ ತೊಡಗಿಸಿದರೆ ಮುಂದೆ ಮಕ್ಕಳು ಸತ್ವ ಜೆಗಳಾಗುತ್ತಾರೆ

—ಟಿ. ಎನ್. ಲಕ್ಷ್ಮಣ ರಾವ್, ಬೆಂಗಳೂರು

## ಸಂಗೀತಗಿರಿ ಕದ್ರಿ



ಅ. 24ರ ಸಂಚಿಕೆಯಲ್ಲಿ ಉಮಾ ಅನಂತ್ ಬರೆದಿರುವ 'ಕದ್ರಿ ಗೋಪಾಲನಾಥ' ಕುರಿತ ಲೇಖನ ತುಂಬ ಚೆನ್ನಾಗಿತ್ತು. ಈ ಲೇಖನ ಆತ್ಮೀಯ ಕಲಾವಿದನಿಗೆ ಸಲ್ಲಿಸಿದ ನುಡಿನಮನವಾಗಿದೆ. ತಮ್ಮ ಸ್ಯಾಕ್ಸೊಫೋನ್ ವಾದನದ ಮೂಲಕ ದೇಶವಿದೇಶಗಳಲ್ಲಿ ಕನ್ನಡ ನಾಡಿನ ಕೀರ್ತಿಯನ್ನು ಬೆಳಗಿದ ಕದ್ರಿ ಎಂಬ ನಾದ ಪಣತಿ ನಾದ ನಿಲ್ಲಿಸಿದ್ದು ಕನ್ನಡ ನಾಡಿಗೆ ತುಂಬಲಾರದ ಹಾನಿ. ಸ್ಯಾಕ್ಸೊಫೋನ್‌ನಲ್ಲಿ ಅನೇಕ ವಿಶೇಷ ಪ್ರಯೋಗಗಳನ್ನು ಮಾಡಿ ಸಂಚಲನವನ್ನು ಮೂಡಿಸಿದ ಮಹಾಸಂಗೀತ ಕಲಾವಿದನು ಬೆಳೆದ ಬಂದ ದಾರಿಯನ್ನು ತೆರೆದಿಟ್ಟ ಭಾವಪೂರ್ಣ ಲೇಖನವಿದು.

—ಕೆ.ಪಿ.ರಾಮಗುಂಡಿ. ಬೈಲಹೊಂಗಲ

## ದೀಪಧಾರಿಗಳಾಗಬೇಕಾದ ಸಮಯ

ಅ. 31ರ ಸಂಚಿಕೆಯ 'ನಿಮ್ಮೊಡನೆ' ಪುಟದಲ್ಲಿ ರಘುನಾಥ ಚ.ಹ. ಬರೆದಿರುವ 'ಎಲ್ಲರೂ ದೀಪಧಾರಿಗಳಾಗಬೇಕಾದ ಸಮಯ' ಲೇಖನ ಓದಿ ಸ್ವಲ್ಪ ಬೇಜಾರಾಯಿತು. ಇನ್ನುಮುಂದೆ ಬೆಳಕಿನ ಬಗ್ಗೆ ರಮ್ಯವಾಗಿ ಮಾತನಾಡುವ ಮನಸ್ಥಿತಿಯಿಂದ ಹೊರಬಂದು ಬದುಕಿನ ಪರಿಸ್ಥಿತಿ ದೀಪ ಬೆಳಗುವಂತಾಗಲಿ.

—ಸೀತಾ ಕೇಶವ, ಸಿಡ್ನಿ

## ಮಕ್ಕಳಾಟಿಕೆ

ಅಕ್ಟೋಬರ್ 24ರ ಸಂಚಿಕೆಯಲ್ಲಿ ಗೀತಾ ವಸಂತ್ ಇಜಿಮಾನ್ ಅವರ 'ಪ್ಲಾಸ್ಟಿಕ್ ಆಟಿಕೆ ಏಕೆ? ತೆಂಗಿನಗರಿಯೇ ಮಕ್ಕಳಾಟಿಕೆ!' ಬರಹ ಸೊಗಸಾಗಿದೆ. ಓದುವಾಗ ನಮ್ಮ ಬಾಲ್ಯವೇ ಕಣ್ಣೆದುರಿಗೆ ಬಂತು. ಆಗ ಅಕ್ಕ ಮಾಡಿಕೊಡುತ್ತಿದ್ದ ಗಿರಿಗಿಟ್ಲೆ, ಕನ್ನಡಕ, ವಾಚು ಮರೆಯಲಾಗದ ಉಡುಗೊರೆಗಳು. ಅಕ್ಕನ ಆ ವಾಚಿನ ಮುಂದೆ ಈಗ ಯಾವ ವಾಚು ಕಟ್ಟಿದರೂ ಅಷ್ಟು ಸಂತೋಷ ಕೊಡಲಾರವು.

—ದೆಗ್ಗನಹಳ್ಳಿ ಆನಂದ್, ಕೆ.ಆರ್.ನಗರ

## ಮನೋಜ್ಞ ಕಥೆ

ಅ. 31ರ ಸಂಚಿಕೆಯಲ್ಲಿ ಪ್ರಕಟವಾದ ಕಾರ್ತಿಕ್ ಆರ್. ಅವರ ಕಥೆ 'ತಿರುವಿನಾಚೆಯ ಮನೆ' ಮನೋಜ್ಞವಾಗಿತ್ತು. ನಗರವೆಂಬುದು ನರಕ, ಹಳ್ಳಿ ಸ್ವರ್ಗ ಎಂಬುದು ಜನಪ್ರಿಯ ಹೇಳಿಕೆ. ಆದರೆ ಇಂದು ಹಳ್ಳಿಗಳೂ ನಗರದ ವೇಷ ತೊಟ್ಟು ನಗುತ್ತಿವೆ. ಆದರೆ ಹಳ್ಳಿ–ನಗರದ ತುಲನೆಯ ವಿಷಯಕ್ಕೆ ಬಂದಾಗ ಮಾತ್ರ ಅದೇ ಹಳೆಯ ಹಳಹಳಿಕೆಗಳಲ್ಲಿಯೇ ಮುಳುಗಿಹೋಗುತ್ತೇವೆ. ಇದನ್ನು ಮೀರಿ ಈ ಕಥೆ ಹಳ್ಳಿಗಳೂ ತೊಡುತ್ತಿರುವ ಆಧುನಿಕತೆಯ ಪರಿವೇಷವನ್ನು, ನಗರದ ನಾಯಕನ ತೊಳಲಾಟವನ್ನು ಚೆನ್ನಾಗಿ ಚಿತ್ರಿಸಿದೆ.

—ಗೌರಿ ಮರಸವತೆ, ಹಳಿಯಾಳ

## ದ.ರಾ. ಬೇಂದ್ರೆ ಸ್ಮೃತಿ ಲೇಖನ ಸ್ಪರ್ಧೆ

ದ.ರಾ. ಬೇಂದ್ರೆ ಕಾವ್ಯ ಕೂಟವು ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ 'ದ.ರಾ. ಬೇಂದ್ರೆ ಸ್ಮೃತಿ ಲೇಖನ ಸ್ಪರ್ಧೆ' ಆಯೋಜಿಸಿದೆ. ಯಾವುದೇ ವಿ.ವಿ.ಯ ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಯಾವುದೇ ರೀತಿಯ ಪ್ರವೇಶ ಧನವಿಲ್ಲ. ₹ 5000, ₹4000, ₹ 3000 ಹೀಗೆ ಮೂರು ನಗದು ಬಹುಮಾನ ಇರುತ್ತವೆ. ಲೇಖನದ ಜೊತೆ ಆಯಾ ಕಾಲೇಜಿನ ಮಾರ್ಗದರ್ಶಕ ಪ್ರಾಧ್ಯಾಪಕರಿಂದ ಅಧಿಕೃತ ಪರಿಚಯ ಪತ್ರ ಲಗತ್ತಿಸಿರಬೇಕು. ಲೇಖನದ ಪದಮಿತಿ 2500. ಲೇಖನಗಳನ್ನು ಕಳಿಸಲು ಕೊನೆಯ ದಿನಾಂಕ: ನವೆಂಬರ್ 25.

ವಿಳಾಸ: ಡಾ. ಜಿ. ಕೃಷ್ಣಪ್ಪ, ಅಧ್ಯಕ್ಷರು, ದ.ರಾ. ಬೇಂದ್ರೆ ಕಾವ್ಯಕೂಟ, #22, ಶ್ರೀಗುರುದತ್ತ ನಿಲಯ, 1ನೇ ತಿರುವು, ನೇತಾಜಿ ನಗರ, ಮತ್ತಿಕೆರೆ, ಬೆಂಗಳೂರು– 560054

ಮಾಹಿತಿಗೆ ದೂರವಾಣಿ: 9972109209

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in